## ವಿದೇಶ ಪ್ರವಾಸ ಕೈಗೊಳ್ಳುವಾಗ ಮರೆಯಬಾರದ ಸಂಗತಿಗಳು

- ವಿದೇಶ ಪ್ರಯಾಣಕ್ಕೆ ಬೇಕಾದ ದಾಖಲೆಗಳನ್ನೆಲ್ಲ ಸಿದ್ಧಪಡಿಸಿಕೊಳ್ಳಿ. ಪಾಸ್ ಪೋರ್ಟ್, ವೀಸಾ, ಇನ್ಶೂರೆನ್ಸ್ ಸೇರಿದಂತೆ ಅಗತ್ಯ ದಾಖಲೆಗಳೆಲ್ಲ ಜೊತೆ ಇರಲಿ.
- ನೀವು ಪ್ರಯಾಣ ಹೊರಟಾಗಿನಿಂದ ಕನಿಷ್ಠ ಆರು ತಿಂಗಳ ವ್ಯಾಲಿಡಿಟಿಯನ್ನು ನಿಮ್ಮ ಪಾಸ್ ಪೋರ್ಟ್ ಹೊಂದಿರಲಿ.
- ಎಲ್ಲಾ ದಾಖಲೆಗಳ ಫೋಟೋಕಾಪಿ ನಿಮ್ಮಲ್ಲಿರಲಿ. ಮಹತ್ವದ ದಾಖಲೆಗಳ ಸಾಫ್ಟ್ ಕಾಪಿಯನ್ನು ಇಮೇಲ್ ನಲ್ಲಿ ಸೇವ್ ಮಾಡಿಟ್ಟುಕೊಂಡಿರುವುದು ಉತ್ತಮ.
- ಎಂಬೆಸಿಯಲ್ಲಿ ಮೊದಲೇ ನೋಂದಣಿ ಮಾಡಿಸಿಕೊಂಡರೆ ಅನಗತ್ಯ ಸಮಸ್ಯೆಗಳು ಎದುರಾಗುವುದಿಲ್ಲ.
- ಹೋಗುವ ದೇಶದ ಸುಂದರ ಸ್ಥಳಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವುದರ ಜೊತೆಗೆ ಅಲ್ಲಿನ ಸಂಸ್ಕೃತಿ, ನೀತಿ ನಿಯಮವನ್ನು ತಿಳಿದುಕೊಳ್ಳಿ. ತುರ್ತು ಸಂದರ್ಭಗಳಲ್ಲಿ ಸಂಪರ್ಕಿಸಲು ಅಗತ್ಯ ನಂಬರ್‌ಗಳನ್ನು ಸಂಗ್ರಹಿಸಿಟ್ಟುಕೊಳ್ಳಿ. ವಿದೇಶ ಪ್ರಯಾಣಕ್ಕೂ ಮುನ್ನ ತಪ್ಪದೇ ವಿಮೆ ಮಾಡಿಸಿ.
- ಅಂತರಾಷ್ಟ್ರೀಯ ಕರೆನ್ಸಿ ಮತ್ತು ಕಾರ್ಡ್‌ಗಳನ್ನು ತಪ್ಪದೇ ಕೊಂಡೊಯ್ಯಿರಿ. ಹೊರಡುವ ಮುನ್ನವೇ ಕರೆನ್ಸಿ ಬದಲಾವಣೆ ಮಾಡಿಸಿಕೊಳ್ಳಿ. ಅಲ್ಲಿನ ಕರೆನ್ಸಿಯ ಸಣ್ಣ ಮೊತ್ತದ ನೋಟು ಮತ್ತು ನಾಣ್ಯಗಳನ್ನು ಕೂಡ ಜೊತೆಗಿಟ್ಟುಕೊಂಡಿರಿ. ನಗದಿನ ಬದಲು ಸಾಧ್ಯವಾದಷ್ಟೂ ಅಂತರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸುವುದು ಉತ್ತಮ.
- ದೂರದ ದೇಶಕ್ಕೆ ಹೆಚ್ಚು ದಿನಗಳ ಕಾಲ ಹೊರಟಿದ್ದರೆ ಅಲ್ಲಿಂದ ಕರೆಮಾಡಲು ಸ್ಥಳೀಯ ಸಿಮ್ ಕಾರ್ಡ್ ಪಡೆಯಿರಿ. ಅದರಲ್ಲಿ ಇಂಟರ್ನೆಟ್ ಸೌಲಭ್ಯ ಕೂಡ ದೊರೆಯುತ್ತದೆ. ವಿಡಿಯೋ ಕಾಲ್ ಮಾಡಬಹುದು, ಇಲ್ಲವೇ, ಅಲ್ಲಿನ ಹೋಟೆಲುಗಳಲ್ಲಿ ಸಿಗುವ ಉಚಿತ ವೈಫೈ ಬಳಸಿಕೊಂಡು ವಾಟ್ಸಾಪ್ ಮತ್ತು ಫೇಸ್ಬುಕ್ ಮೂಲಕ ಮನೆಯವರೊಂದಿಗೆ ಸಂಪರ್ಕದಲ್ಲಿರಬಹುದು. ಹತ್ತಿರದ ದೇಶಕ್ಕೆ ಹೊರಟಿದ್ದರೆ ನಿಮ್ಮ ಮೊಬೈಲ್‌ನಲ್ಲಿ ಅಂತರಾಷ್ಟ್ರೀಯ ರೋಮಿಂಗ್ ಕರೆಗಳನ್ನು ಆಕ್ಟಿವೇಟ್ ಮಾಡಿಕೊಳ್ಳಬಹುದು.





ಅಲ್ಲಿನ ಸಿಮ್ ಬೇಕಿದ್ದಲ್ಲಿ ಖರೀದಿಸಬಹುದು. ಅಲ್ಲಿನ ಹೋಟೆಲ್‌ಗಳಲ್ಲಿ ಉಚಿತ ವೈಫೈ ಇರುವುದರಿಂದ ಅದರಲ್ಲಿಯೇ ಉಚಿತವಾಗಿ ಮಾತನಾಡಬಹುದು.

### ಪ್ರವಾಸದ ಆಯ್ಕೆ ಹೇಗೆ?

ಪ್ರವಾಸ ನಮ್ಮ ದೈನಂದಿನ ಜೀವನದಲ್ಲಿನ ಏಕತಾನತೆಯನ್ನು, ಒತ್ತಡವನ್ನು ದೂರಮಾಡುವಲ್ಲಿ ನೆರವಾಗುತ್ತದೆ. ಮೊಬೈಲ್ ರೀಚಾರ್ಜ್ ಮಾಡುವಂತೆ ನಮ್ಮ ಜೀವನೋತ್ಸಾಹ ತುಂಬಿಕೊಳ್ಳಲು ಪ್ರವಾಸ ಸಹಕಾರಿ. ವಿದೇಶ ಪ್ರವಾಸವನ್ನು ಆಯ್ಕೆ ಮಾಡುವಾಗ ಅತ್ಯಂತ ನಿರ್ಣಾಯಕ ವಿಷಯವೆಂದರೆ ಬಜೆಟ್. ಪ್ರತಿಯೊಂದನ್ನೂ ಅದು ಅವಲಂಬಿಸಿರುತ್ತದೆ. ಮೊದಲ ವಿದೇಶ ಪ್ರವಾಸಕ್ಕೆ ಅದರದ್ದೇ ಆದ ಮಹತ್ವವಿದೆ. ನಮ್ಮಲ್ಲಿ ಅದು ರೋಮಾಂಚನ, ಸಂತೋಷ ಮತ್ತು ಗಡಿ ದಾಟುವ ಪುಳಕಕ್ಕೆ ಕಾರಣವಾಗುತ್ತದೆ.

ಸುಮಾರು ಇಪ್ಪತ್ತು ವರ್ಷಗಳಿಂದ ವಿವಿಧ ಪ್ರವಾಸಿ ಕಂಪೆನಿಗಳಲ್ಲಿ ಕೆಲಸ ಮಾಡಿ ಅನುಭವವಿರುವ ಸಾಗರ್ ಸಿಂಗ್ ಹೇಳುವಂತೆ, 'ವಿದೇಶ ಪ್ರವಾಸ ದುಬಾರಿ ಎಂದು ನಂಬಿ ಬಹಳ ಮಂದಿ ಪಾಸ್ ಪೋರ್ಟ್ ಕೂಡ ಮಾಡಿಸಿರುವುದಿಲ್ಲ. ಈ ನಂಬಿಕೆ ಸಂಪೂರ್ಣ ನಿಜವಲ್ಲ. ಅದು ನಾವು ಆಯ್ಕೆ ಮಾಡುವ ದೇಶವನ್ನು ಅವಲಂಬಿಸಿರುತ್ತದೆ. ನಮ್ಮ ದೇಶದಲ್ಲಿ ಒಂದು ರಾಜ್ಯವನ್ನು ನೋಡಿ ಬರಲು ಬೇಕಾಗುವ ಹಣದಲ್ಲಿ ಸುಲಭವಾಗಿ ಒಂದು ವಿದೇಶಿ ನೆಲಕ್ಕೆ ಕಾಲಿಟ್ಟು ಪ್ರವಾಸ ಮಾಡಿ ಬರಬಹುದು. ಆದರೆ ಅದಕ್ಕೆ ನಾವು